3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 26/2020**

ಪ್ರಾಸಾ 4

ಚಾಸಾ 4

| | |
|---|---|
| ಹೆಸರು | ಶಂಕರಮ್ಮ |
| ಗಂಡನ ಹೆಸರು | ಲೇಟ್ ಚಂದ್ರಯ್ಯ |
| ವಯಸ್ಸು | 50 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕಡಬಾ |

ಸಾಕ್ಷಿಯನ್ನು ದಿನಾಂಕ 26.06.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸುತ್ತೇನೆ. ಅವರು ಬರಸಿಡಿಲಹಳ್ಳಿಯವರು. ನಾವು ಆದಿಕರ್ನಾಟಕ ಮಾದಿಗ ಜಾತಿಗೆ ಸೇರಿರುತ್ತೇವೆ. ಆರೋಪಿ ಆಂಜನಪ್ಪ ರವರು ಮಡಿವಾಳ ಜಾತಿಗೆ ಸೇರಿದವರು. ಉಳಿದ ಆರೋಪಿಗಳು ಒಕ್ಕಲಿಗ ಜಾತಿಗೆ ಸೇರಿರುತ್ತಾರೆ. ಆರೋಪಿಗಳಿಗೆ ನಾವು ಯಾವ ಜಾತಿಯವರು ಎಂದು ಗೊತ್ತಿತ್ತು.

2) ಸಿಂಗದಹಳ್ಳಿ ಗ್ರಾಮದಲ್ಲಿ ನಮ್ಮದು ಸ.ನಂ.24 ರಲ್ಲಿ ಜಮೀನು ಇರುತ್ತದೆ. ಚಾಸಾ.1 ರವರು ನನ್ನ ಅಣ್ಣನ ಮಗಳು. ಚಾಸಾ.2 ನನ್ನ ತಮ್ಮನ ಹೆಂಡತಿ. ಚಾಸಾ.3 ರವರೂ ಸಹ ನನ್ನ ತಮ್ಮನ ಹೆಂಡತಿ. ಚಾಸಾ.5 ರವರು ನನ್ನ ಸಂಬಂಧಿ.

3) ಸುಮಾರು ಐದಾರು ವರ್ಷಗಳ ಹಿಂದೆ ಮಧ್ಯಾಹ್ನ 3 ಗಂಟೆಗೆ ನಮ್ಮ ಜಮೀನಿನಲ್ಲಿರುವ ಮನೆಯಲ್ಲಿದ್ದಾಗ ಆರೋಪಿಗಳೆಲ್ಲಾ ಚಾಸಾ.1 ರವರಿಗೆ ನಮ್ಮ ತಂದೆಯ ಅಡಿಕೆ ತೋಟದಲ್ಲಿ ಹೊಡೆಯುತ್ತಿದ್ದರು. ಆರೋಪಿಗಳಾದ ಬಸವರಾಜು ಅಲಿಯಾಸ್ ರಾಜಣ್ಣ ರವರು ಚಾಸಾ.1 ರವರ ಕೆನ್ನೆಗೆ ಹೊಡೆದು ಎದೆಗೆ ಗುದ್ದಿ ಮಾದಿಗಿತ್ತಿ, ನಿನ್ನನ್ನು ಹೊಡೆದು ಹಾಕುತ್ತೇನೆ, ಹೂತು ಹಾಕುತ್ತೇನೆ, ನಿಮ್ಮದೆಲ್ಲಿದೆ ಜಮೀನು, ನಮ್ಮದು ಎಂದು ಹೊಡೆದಿರುತ್ತಾರೆ.

4) ಆರೋಪಿ ಆಂಜನಪ್ಪರವರು ದೊಣ್ಣೆ ಹಿಡಿದುಕೊಂಡು ಚಾಸಾ.1 ರವರ ಬೆನ್ನಿಗೆ ಹೊಡೆದು ಮಾದಿಗಿತ್ತಿ ಮುಂಡೆ, ನಿಮ್ಮದೆಲ್ಲಿದೆ ಜಮೀನು, ನಮ್ಮದು ಜಮೀನು, ನಿಮಗೆ ಅವಮಾನ ಮಾಡುತ್ತೇವೆ, ಹೂತು ಹಾಕುತ್ತೇವೆ ಎಂದು ಬೈದಿರುತ್ತಾರೆ. ಆಗ ನಾನು, ಸಾವಿತ್ರಮ್ಮ, ಮೋಹನ ಮತ್ತು ನಾಗಮ್ಮ ರವರೆಲ್ಲಾ ಸೇರಿ ಆರೋಪಿಗಳಿಗೆ ಚಾಸಾ.1 ರವರನ್ನು ಏಕೆ ಹೊಡೆಯುತ್ತಿದ್ದೀಯಾ ಎಂದು ಕೇಳಿದೆವು. ಆಗ ಆರೋಪಿಗಳು ಜಮೀನು ನಿಮ್ಮದಲ್ಲ ಎಂದು ಕೆಟ್ಟ ಮಾತುಗಳಿಂದ ಬೈದಿರುತ್ತಾರೆ. ಆರೋಪಿಗಳು ನಮ್ಮನ್ನು ಊರಿನಿಂದ ಬಿಡಿಸುತ್ತೇವೆ, ಸಾಯಿಸುತ್ತೇವೆ ಎಂದು ಹೆದರಿಸಿರುತ್ತಾರೆ. ಆಗ ನಾವು ಹೆದರಿಕೊಂಡು ತೋಟದಿಂದ ಆಚೆ ಬಂದಿರುತ್ತೇವೆ. ನಂತರ ಚಾಸಾ.1 ರವರು ಘಟನೆಯ ಬಗ್ಗೆ ದೂರನ್ನು ನೀಡಿರುತ್ತಾರೆ. ನಂತರ ತುಮಕೂರಿನ ಡಿವೈ ಎಸ್ ಪಿ ರವರ ಕಚೇರಿಯಲ್ಲಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

5) ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ವಸ್ತುಗಳಲ್ಲಿ ಒಂದು ಚಾಸಾ.1 ರವರ ನೈಟಿ ಮತ್ತು ಆಂಜನಪ್ಪ ರವರ ಹತ್ತಿರ ಇದ್ದ ದೊಣ್ಣೆ ಆಗಿರುತ್ತದೆ. ದೊಣ್ಣೆಯನ್ನು ಈಗಾಗಲೇ ಮು.ಮಾ.1 ಎಂದು, ನೈಟಿಯನ್ನು ಮು.ಮಾ 2 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ

ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

6) ನನ್ನ ತವರು ಮನೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಿಕೆರೆ ಹೋಬಳಿಯ ಸಿಂಗದಹಳ್ಳಿ. ನನಗೆ ಇಬ್ಬರು ಮಕ್ಕಳು. ಅವರ ಹೆಸರು ರಂಗರಾಜು ಮತ್ತು ಪ್ರಕಾಶ್ ಎಂದರೆ ಸರಿ. ನನ್ನ ಗಂಡ ಚಂದ್ರಯ್ಯ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಹೆಸರಿನಲ್ಲಿ ಸ.ನಂ.24/1 ಎಫ್ ನಲ್ಲಿ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ನನ್ನ ತಂದೆ ಸುಮಾರು 6 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನಮಗೂ ಮತ್ತು ಆರೋಪಿಗಳಿಗೆ ಜಮೀನಿನ ಸ್ವಾಧೀನದ ವಿಚಾರದಲ್ಲಿ ವೈಷಮ್ಯ ಇರುತ್ತದೆ ಎಂದರೆ ಸರಿ. ದಿಃ12.10.2019 ರಂದು ಗಲಾಟೆ ಆಗಿರುತ್ತದೆ ಎಂದರೆ ಸರಿ. ಅಂದು ನಾನು ನಮ್ಮ ತೋಟಕ್ಕೆ ಹೋಗುತ್ತಿದ್ದೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆಗ ಚಾಸಾ.1 ರವರೂ ಸಹ ತೋಟಕ್ಕೆ ಹೋಗುತ್ತಿದ್ದರು ಎಂದರೆಸ ರಿ. ಆಗ ಆರೋಪಿಗಳೆಲ್ಲರೂ ಬಂದಿರುತ್ತಾರೆ ಎಂದರೆ ಸರಿ. ಆಗ 1ನೇ ಆರೋಪಿ ಚಾಸಾ.1 ರವರಿಗೆ ಏಕೆ ನಮ್ಮ ತೋಟಕ್ಕೆ ಬಂದಿದ್ದೀಯಾ ಮಾದಿಗಮುಂಡೆ ಎಂದು ಜಾತಿ ನಿಂದನೆ ಮಾಡಿ ಬೈದಿರುತ್ತಾರೆ ಎಂದರೆ ಸರಿ.

7) ಆರೋಪಿ ಗಂಗಣ್ಣ ರವರು ಚಾಸಾ.1 ರವರನ್ನು ಕುರಿತು ಈ ಮಾದಿಗ ಮುಂಡೆಯನ್ನು ಅತ್ಯಾಚಾರ ಮಾಡಿ ಸಾಯಿಸಿ ಇಲ್ಲೇ ಹೂತು ಹಾಕೋಣ ಎಂದು ಕಿರುಚಾಡಿ ನೈಟಿಯನ್ನು ಹರಿದು ಹಾಕಿ ಕೈಯಿಂದ ಎದೆಯ ಹತ್ತಿರ ಗುದ್ದಿರುತ್ತಾರೆ ಎಂದರೆ ಸರಿ. ಆಗ ನಾವೆಲ್ಲಾ ಬಿಡಿಸಿಕೊಳ್ಳಲು ಹೋಗಿರುತ್ತೇವೆ ಎಂದರೆ ಸರಿ. ಆಗ ನಾನು ಬಿಡಿಸಿಕೊಳ್ಳಲು ಹೋದಾಗ ಆರೋಪಿ ಜಯಣ್ಣರವರು ನನಗೆ ಕಾಲಿನಿಂದ ಒದ್ದಿರುತ್ತಾರೆ

ಎಂದರೆ ಸರಿ. ಕೈಗಳಿಂದ ಕುತ್ತಿಗೆಗೆ ಹೊಡೆದಿರುತ್ತಾರೆ ಎಂದರೆ ಸರಿ. ನನಗೂ ಸಹ ಮಾದಿಗಮುಂಡೆ ಎಂದು ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಎಂದರೆ ಸರಿ. ಆರೋಪಿ ಅಂಜನಪ್ಪರವರು ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ ಅಂಜನಪ್ಪರವರು ದೊಣ್ಣೆಯಿಂದ ಸಾವಿತ್ರಮ್ಮ ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ ನಾನು, ನಾಗಮ್ಮ ಮತ್ತು ಮೋಹನರವರು ಹೋಗಿ ಉಮಾದೇವಿ ಮತ್ತು ಸಾವಿತ್ರಮ್ಮರವರನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಆಂಜನಪ್ಪ ರವರು ಹೋಗುವಾಗ ದೊಣ್ಣೆಯನ್ನು ಸ್ಥಳದಲ್ಲಿಯೇ ಬಿಸಾಕಿ ಹೋದರು ಎಂದರೆ ಸರಿ. ನಂತರ ನಾವು ಉಮಾದೇವಿ ಸಾವಿತ್ರಮ್ಮರವರನ್ನು ಕರೆದುಕೊಂಡು ಹೋಗಿ ಮನೆಯ ಹತ್ತಿರ ಬಿಟ್ಟೆವು ಎಂದರೆ ಸರಿ. ನಂತರ ಉಮಾದೇವಿ ಮತ್ತು ಸಾವಿತ್ರಮ್ಮರವರಿಗೆ ಏಟಾಗಿದ್ದರಿಂದ ಚಿಕಿತ್ಸೆ ಪಡೆಯಲು ಚಿಕ್ಕನಾಯಕನಹಳ್ಳಿ ಆಸ್ಪತ್ರೆಗೆ ಹೋದರು ಎಂದರೆ ಸರಿ. ಈ ರೀತಿಯಾಗಿ ನಾನು ಪೊಲೀಸರು ಕೇಳಿದಾಗ ಹೇಳಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.N.B. ವಕೀಲರಿಂದ :**

(ಪಾಟೀಸವಾಲನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ

ಸಾಕ್ಷಿಯನ್ನು ದಿನಾಂಕ 10.03.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.N.B. ವಕೀಲರಿಂದ :**

8) ನಾನು ಕಡಬಾದಲ್ಲಿ ಮತ್ತು ಸಿಂಗದಹಳ್ಳಿಯಲ್ಲಿ ಎರಡೂ ಕಡೆ ವಾಸ ಮಾಡುತ್ತಿದ್ದೇನೆ. ನಾನು ಪೊಲೀಸರ ಮುಂದೆ ಎರಡೂ ಕಡೆ ವಾಸ ಮಾಡುತ್ತಿದ್ದೇನೆಂದು ಹೇಳಿರುತ್ತೇನೆ. ಕಡಬಾದಲ್ಲಿ ನನ್ನ ಗಂಡನ ಜಮೀನು ಇರುವುದಿಲ್ಲ. ನನ್ನದು, ನನ್ನ ಮಕ್ಕಳದ್ದು ಹಾಗೂ ನನ್ನ ಗಂಡನ ಪಡಿತರ ಚೀಟಿ ಇರುವುದು ಕಡಬಾದಲ್ಲಿ ಎಂದರೆ ಸರಿ. ನನ್ನ ಮಕ್ಕಳು ಕೂಲಿ ಕೆಲಸ ಮಾಡುತ್ತಾರೆ. ನನಗೆ ಇಬ್ಬರು ಗಂಡು ಮಕ್ಕಳು. ನನಗೆ ಮದುವೆಯಾಗಿ ಸುಮಾರು 35 ವರ್ಷಗಳಾಗಿರುತ್ತದೆ. ಕಡಬಾದಲ್ಲಿ ನನ್ನ ಗಂಡನ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನಾನು ಮದುವೆಯಾದ ನಂತರ ಕಡಬಾದಲ್ಲಿ ಗಂಡ ಮತ್ತು ಮಕ್ಕಳೊಂದಿಗೆ ವಾಸ ಮಾಡುತ್ತಿದ್ದೇನೆ ಎಂದರೆ ಸಾಕ್ಷಿಯು ಎರಡೂ ಕಡೆ ವಾಸ ಮಾಡುತ್ತಿದ್ದೇನೆಂದು ನುಡಿಯುತ್ತಾರೆ.

9) ನಾನು ಕಳೆದ ಬಾರಿ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿರುವುದನ್ನು ಹೊರತುಪಡಿಸಿ ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸಿಂಗದಹಳ್ಳಿ ಗ್ರಾಮದಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಳ್ಳುವಾಗ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿಲ್ಲ. ಯಾವ ತಾರೀಖಿನಂದದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಗಲಾಟೆಯಾದ ಎಷ್ಟು ದಿನಗಳ ನಂತರ ನಾನು ಸಹಿ ಮಾಡಿರುತ್ತೇನೆಂದು ನೆನಪಿಲ್ಲ. ಗಲಾಟೆಯಾದ ದಿನಾಂಕ ನನಗೆ ಗೊತ್ತಿಲ್ಲ ಎಂದರೆ ಸರಿ.

10) ನನ್ನ ಅಣ್ಣ ಗಿರಿಯಪ್ಪರವರು 10ನೇ ತರಗತಿಯಲ್ಲಿ ಫೇಲ್ ಆಗಿರುತ್ತಾರೆ. ಊರಿನಲ್ಲಿ ಅವರೇ ಜಮೀನಿನ ಯಜಮಾನಿಕೆಯನ್ನು ಮಾಡುತ್ತಿದ್ದಾರೆ ಎಂದರೆ

ಸರಿಯಲ್ಲ. ಕಳೆದ ಬಾರಿ ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಬಂದಾಗ ನನ್ನೊಂದಿಗೆ ಗಿರಿಯಪ್ಪರವರೂ ಸಹ ಬಂದಿದ್ದರು ಎಂದರೆ ಸಾಕ್ಷಿಯು ನಾನು ಒಬ್ಬಳೇ ಬಂದಿದ್ದೆ ಎಂದು ನುಡಿಯುತ್ತಾರೆ. ಗಿರಿಯಪ್ಪರವರು ಹೇಳಿಕೊಟ್ಟಂತೆ ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11) ಚಾಸಾ.5 ರವರು ನಮ್ಮ ಊರಿನ ಪಕ್ಕದ ಕಾರೇಹಳ್ಳಿ ಗ್ರಾಮದವರು ಎಂದರೆ ಸರಿ. ನನಗೆ ಅವರ ಪರಿಚಯ ಇರುತ್ತದೆ ಎಂದರೆ ಸರಿ. ಚಾಸಾ.5 ರವರು ದಲಿತ ಸಂಘದ ಉಪಾಧ್ಯಕ್ಷರು ಎಂದರೆ ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಹಾಜರಿರುವ 2 ರಿಂದ 4 ನೇ ಆರೋಪಿತರನ್ನು ನೋಡಿ ಸಾಕ್ಷಿಯು 2 ಮತ್ತು 4 ನೇ ಆರೋಪಿತರ ಹೆಸರುಗಳನ್ನು ಹೇಳಿದ್ದು 3 ನೇ ಆರೋಪಿಯ ಹೆಸರನ್ನು ದೊಡ್ಡರಂಗಯ್ಯ ಎಂದು ಹೇಳಿರುತ್ತಾರೆ. ಆರೋಪಿತರು ಬರಸೇನಹಳ್ಳಿ ಗ್ರಾಮದವರು. ನಾನು ಆರೋಪಿತರನ್ನು ಯಾವತ್ತೂ ನೋಡಿರುವುದಿಲ್ಲ ಮತ್ತು ಚಾಸಾ.6 ರವರು ಹೇಳಿಕೊಟ್ಟಂತೆ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12) ಸಿಂಗದಹಳ್ಳಿ ಗ್ರಾಮದಲ್ಲಿ ನಾನು ಇರಲಿಲ್ಲ ಮತ್ತು ಯಾವುದೇ ಘಟನೆಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಗಿರಿಯಪ್ಪ, ರಾಮಯ್ಯ, ಸ್ವಾಮಿ ಮತ್ತು ತಮ್ಮಯ್ಯರವರು ಆರೋಪಿತರ ಸ್ವಾಧೀನದಲ್ಲಿರುವ ಜಮೀನಿಗೆ ಹೋಗಿ ಅಕ್ರಮ ಪ್ರವೇಶ ಮಾಡಿ ಅವರ ತೆಂಗಿನ ತೋಟದಲ್ಲಿ ತೆಂಗಿನ ಕಾಯಿಗಳನ್ನು ಮತ್ತು ಅಡಿಕೆಯನ್ನು ಕಳ್ಳತನ ಮಾಡಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಗಂಗಣ್ಣರವರು ಪೊಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆದ್ದರಿಂದ, ಆ ಪ್ರಕರಣದಲ್ಲಿ ಶಿಕ್ಷೆಯಾಗುತ್ತದೆ ಎಂದು ಚಾಸಾ.1 ಮತ್ತು 2 ರವರನ್ನು ಎತ್ತಿಕಟ್ಟಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

13) ಸುಮಾರು ಐದಾರು ವರ್ಷಗಳ ಹಿಂದೆ ಮಧ್ಯಾಹ್ನ 3 ಗಂಟೆಗೆ ನಮ್ಮ ಜಮೀನಿನಲ್ಲಿರುವ ಮನೆಯಲ್ಲಿದ್ದಾಗ ಆರೋಪಿತರು ಚಾಸಾ.1 ರವರಿಗೆ ನಮ್ಮ ತಂದೆಯ ಅಡಿಕೆ ತೋಟದಲ್ಲಿ ಹೊಡೆಯುತ್ತಿದ್ದು, ಆಗ ಆರೋಪಿತರಾದ ಬಸವರಾಜು ಅಲಿಯಾಸ್ ರಾಜಣ್ಣರವರು ಚಾಸಾ.1 ರವರ ಕೆನ್ನೆಗೆ ಹೊಡೆದು, ಎದೆಗೆ ಗುದ್ದಿ, ಮಾದಿಗಿತ್ತಿ ನಿನ್ನನ್ನು ಹೊಡೆದು ಹಾಕುತ್ತೇವೆ, ಹೂತು ಹಾಕುತ್ತೇವೆ, ನಿಮ್ಮದೆಲ್ಲಿದೆ ಜಮೀನು, ನಮ್ಮದು ಜಮೀನು ಎಂದು ಹೊಡೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14) ಆರೋಪಿ ಆಂಜನಪ್ಪರವರು ದೊಣ್ಣೆಯಿಂದ ಚಾಸಾ.1 ರವರ ಬೆನ್ನಿಗೆ ಹೊಡೆದು ಮಾದಿಗಿತ್ತಿ ಮುಂಡೆ, ನಿಮ್ಮದೆಲ್ಲಿದೆ ಜಮೀನು, ನಮ್ಮದು ಜಮೀನು, ನಿಮಗೆ ಅವಮಾನ ಮಾಡುತ್ತೇವೆ, ಹೂತು ಹಾಕುತ್ತೇವೆ ಎಂದು ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಹತ್ತಿರ ಬಂದಾಗ ನಾನು ಸಹಿ ಮಾಡಿ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು 2 ರವರು ತೋಟದಿಂದ ಆಂಬುಲೆನ್ಸ್ ವಾಹನದಲ್ಲಿ ಚಿಕ್ಕನಾಯಕನಹಳ್ಳಿ ಆಸ್ಪತ್ರೆಗೆ ಹೋಗಿರುತ್ತಾರೆ, ಆಗ ಸಂಜೆಯಾಗಿತ್ತು. ನಾನು ಅವರೊಂದಿಗೆ ಆಸ್ಪತ್ರೆಗೆ ಹೋಗಿದ್ದೆ. ಘಟನೆಯಾದ ಸಮಯದಲ್ಲಿ ಗಿರಿಯಪ್ಪ, ತಮ್ಮಯ್ಯ, ಸ್ವಾಮಿ ಮತ್ತು ರಾಮಣ್ಣರವರು ಇರಲಿಲ್ಲ ಮತ್ತು ಅವರು ಆಸ್ಪತ್ರೆಗೆ ಬಂದಿರಲಿಲ್ಲ. ನಾನು ಆಸ್ಪತ್ರೆಯಲ್ಲಿ ರಾತ್ರಿ 10.30 ಗಂಟೆ ತನಕ ಇದ್ದೆ. ಅಲ್ಲಿಯವರೆಗೆ ನನ್ನ ತಮ್ಮಂದಿರು ಆಸ್ಪತ್ರೆಗೆ ಬಂದಿರುವುದಿಲ್ಲ. ಅಂದು ನನ್ನ ನಾಲ್ಕು ಜನ ತಮ್ಮಂದಿರು ನ್ಯಾಯಾಲಯಕ್ಕೆ ಹೋಗಿದ್ದರು. ಚಾಸಾ.1 ಮತ್ತು 2 ರವರು ನಾನು ಆಸ್ಪತ್ರೆಯಿಂದ ಹೊರಟಾಗ ಅವರು ಆಸ್ಪತ್ರೆಯಲ್ಲಿಯೇ ಇದ್ದರು. ಮಾರನೇ ದಿನ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ , ಸಿಂಗದಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ. ಆಗ ನನ್ನ ತಮ್ಮಂದಿರು ಊರಿಗೆ ಬಂದಿದ್ದರು.

15) ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಯ ಪಕ್ಕದಲ್ಲಿ ಪೋಲೀಸ್ ಠಾಣೆ ಇರುತ್ತದೆ ಎಂದರೆ ಸಾಕ್ಷಿಯು ಒಂದು ಮೈಲಿ ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಚಾಸಾ.1 ಮತ್ತು 2 ರವರು ಚಿಕ್ಕನಾಯಕನಹಳ್ಳಿ ಪೋಲೀಸ್ ಠಾಣೆಗೆ ಹೋಗಿದ್ದರು. ನಾನು ಪೋಲೀಸ್ ಠಾಣೆಯ ಹತ್ತಿರ ಹೋಗಿರುವುದಿಲ್ಲ. ಅವರು ಪೋಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟು ಬಂದಿರುತ್ತಾರೆ. ಚಾಸಾ.6 ರವರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ